CC No.2335/2022
CW-2  PW-2

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು  ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ.  2335/2022**

**ಹೆಸರು** :- **ಪ್ರವೀಣ ಕುಮಾರ**

**ತಂದೆಯ ಹೆಸರು** :- **ಶ್ರೀಧರ್**

**ವಯಸ್ಸು** :- **43 ವರ್ಷ**

**ಉದ್ಯೋಗ** :- **ವಕೀಲ ವೃತ್ತಿ**

**ಸ್ಥಳ** :- **ಸೊರಬ**

**ದಿನಾಂಕಃ 17.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಹೆಂಡತಿ. ಚಾಸಾ-3 ನನ್ನ ಸಹೋದರ. ಆರೋಪಿತರ ಪರಿಚಯ ಇರುತ್ತದೆ. ದಿಃ 14.02.2022 ರಂದು ರಾತ್ರಿ ಸುಮಾರು 9.00 ರ ಸಮಯದಲ್ಲಿ ನನಗೆ ಅನಾರೋಗ್ಯ ಉಂಟಾಗಿದ್ದು ಆಸ್ಪತ್ರೆಗೆ ಹೋಗಲು ನಾನು ಮತ್ತು ಚಾಸಾ-1 ರವರು ಹೊರಟಿದ್ದು, ನಾನು ಕಾರನ್ನು ತೆಗೆಯಲು ಕಾರ್ ಶೆಡ್ ಗೆ ಹೋಗಿದ್ದು, 1 ರಿಂದ 5 ನೇ ಆರೋಪಿತರು ನಾವು ಇದ್ದ ನಮ್ಮ ಜಾಗಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ಚಾಸಾ-1 ರವರಿಗೆ ಸೂಳೇ ಮುಂಡೆ ಬೇವರ್ಸಿ ಮುಂಡೆ ಎಂದು ಬೈದಿರುತ್ತಾರೆ. 2 ನೇ ಆರೋಪಿಯು ಚಾಸಾ-1 ರವರ ಜುಟ್ಟನ್ನು ಹಿಡಿದು ಎಳೆದಾಡಿರುತ್ತಾರೆ. 1 ನೇ ಆರೋಪಿಯು ಚಾಸಾ-1 ರವರ ಕೈಯನ್ನು ಹಿಡಿದು ಎಳೆದಾಡಿರುತ್ತಾರೆ. ನಾನು ಬಿಡಿಸಲು ಹೋದಾಗ 4 ಮತ್ತು 5 ನೇ ಆರೋಪಿತರು ನನ್ನನ್ನು ಹಿಡಿದುಕೊಂಡಿರುತ್ತಾರೆ. ಆಗ ಚಾಸಾ-1 ರವರು ಕೆಳಗೆ

ಬಿದ್ದಿದ್ದು, 1 ಮತ್ತು 3 ನೇ ಆರೋಪಿತರು ಚಾಸಾ–1 ರವರನ್ನು ಚಪ್ಪಲಿ ಕಾಲಿನಿಂದ ತುಳಿದಿರುತ್ತಾರೆ. ಆಗ ಅವರ ಬಟ್ಟೆಗಳು ಹರಿದಿರುತ್ತವೆ. ಚಾಸಾ–1 ರವರಿಗೆ ಈ ಜಾಗಕ್ಕೆ ಬಂದರೆ ನಿನ್ನನ್ನು ಬಿಡುವುದಿಲ್ಲ. ನೀನು ಪಟ್ಟಣ ಪಂಚಾಯ್ತಿ ಸದಸ್ಯರಾದರೆ ನಮಗೆ ಭಯವಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ಚಾಸಾ–4 ಮತ್ತು 5 ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ಆರೋಪಿತರು ನನಗೆ ಮತ್ತು ಚಾಸಾ–1 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ. ಆಗ ನಾನು ಮತ್ತು ಚಾಸಾ–1 ರವರು ಹಲ್ಲೆಯಿಂದ ಆದ ಗಾಯಗಳಿಗೆ ಸೊರಬ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ಈ ಬಗ್ಗೆ ಚಾಸಾ–1 ರವರು ಹೇಳಿಕೆ ದೂರನ್ನು ನೀಡಿರುತ್ತಾರೆ. ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆ ದಿನ ನನ್ನ ಮತ್ತು ಚಾಸಾ–1 ರವರ ಮೇಲೆ ಹಲ್ಲೆ ಮಾಡಿದ ಆರೋಪಿತರಾದ 1, 2, 4 ಮತ್ತು 5 ರವರನ್ನು ನೋಡಿ ಗುರುತಿಸಿದ್ದು, 3 ನೇ ಆರೋಪಿಯು ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆರೋಪಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗೆ ಸಮಯ ಕೋರಿದ್ದು, ರೂ.100/– ಖರ್ಚಿನೊಂದಿಗೆ ಸಮಯ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**